ಸರಿಯಾದ ಉತ್ತರ ಕೊಡಬೇಕು. ಮದುವೆಯಾದ ಮೇಲೆ ಸೀದಾ ಇಲ್ಲಿಗೇ ಬಂದು ಅವಳೊಂದಿಗೆ ಕೋಟಿತೀರ್ಥದಲ್ಲಿ ಪೂಜೆಗೆ ಕೂರುತ್ತೇನೆ.'' ಎಂದಿದ್ದ. ''ಬಿಡುವು ಮಾಡಿಕೊಂಡು ಬಂದುಬಿಡು ಮತ್ತೆ, ಯಾವ ಬಂಧನವೂ ಇಲ್ಲವಲ್ಲ ನಿನಗೀಗ.'' ಎಂದು ಮಧುಕೇಶ್ವರ ಬೀಳ್ಕೊಂಡಿದ್ದ...

## ಭಾಗ – 2

ರೂಮಿನ ಕಾಲಿಂಗ್ ಬೆಲ್ ಸದ್ದಾಗುವುದರೊಂದಿಗೆ ಅಲ್ಲಮಪ್ರಭು ನೆನಪುಗಳಿಂದ ಕಳಚಿಕೊಂಡು ವರ್ತಮಾನಕ್ಕೆ ಬಂದಿದ್ದ. ತೆರೆದ ಬಾಗಿಲಿನಲ್ಲಿ ಮಧುಕೇಶ್ವರ ನಿಂತಿದ್ದ. ತಾನು ವರದಾ ನದಿಯಲ್ಲಿ ಮುಳುಗಿದಂತೆ ಬಿದ್ದ ಕನಸಿನ ಬಗ್ಗೆ ಮಧುಕೇಶ್ವರನ ಬಳಿ ಹೇಳಿದ್ದ. ''ಇಲ್ಲಿ ಕೋಲ್ಕತ್ತಾದಲ್ಲಿ ಹರಿತಿರೋದು ಹೂಗ್ಲಿ ನದಿ, ಹೂಗ್ಲಿ ಗಂಗಾ ಅಂತಾಲೂ ಕರಿತಾರೆ. ಕೋಲ್ಕತ್ತಾದಲ್ಲಿದ್ದರೂ ನಿನಗೆ ವರದಾ ನದಿ ಕನಸಿಗೆ ಬಂದಿದೆಯೆಂದರೆ ಅದು ನನ್ನಿಂದಾಗಿಯೇ ಇರಬೇಕು. ಅಂದರೆ, ಮಧುಕೇಶ್ವರ ಎಲ್ಲಿರುತ್ತಾನೋ ಅಲ್ಲಿ ವರದಾ ನದಿ ಇರುತ್ತದೆ ಎಂದೇ ಅರ್ಥ. ಇನ್ನು ಹರಿಯುವ ನದಿಯಲ್ಲಿ ಮುಳುಗಿದಂತೆ ಕನಸು ಬಿದ್ದಿದ್ದರೆ ನೀನು ಸದ್ಯದಲ್ಲೇ ಸುಖದಲ್ಲಿ ಮುಳುಗುತ್ತೀಯ ಎಂದೇ ಅರ್ಥ. ನನ್ನ ಮಾತು ಸುಳ್ಳಾದರೆ ನೋಡು ಮತ್ತೆ...'' ಮಧುಕೇಶ್ವರ ನಗುತ್ತಾ ಪ್ರತಿಕ್ರಿಯಿಸಿದ್ದ. ಇಬ್ಬರೂ ಟ್ಯಾಕ್ಸಿ ಹತ್ತಿ ಸೋನಾಗಾಚಿಯಲ್ಲಿ ಬಂದು ಇಳಿದಿದ್ದರು. ''ಏಷ್ಯಾದಲ್ಲಿಯೇ ಅತ್ಯಂತ ದೊಡ್ಡ ರೆಡ್ ಲೈಟ್ ಏರಿಯಾ ಈ ಸೋನಾಗಾಚಿ. ಮೊದಲು ಹತ್ತು ಸಾವಿರ ಲೈಂಗಿಕ ಕಾರ್ಯಕರ್ತೆಯರು, ಅಂದರೆ ಸೂಳೆಯರು ಇದ್ದರಂತೆ. ಈಗ ಏಳು ಸಾವಿರ ಜನ ಇದ್ದಾರೆಂದು ಕೋಲ್ಕತ್ತಾ ಮುನಿಸಿಪಲ್ ಕಾರ್ಪೊರೇಷನ್‌ನವರು ಹೇಳ್ತಾರೆ. ಇಷ್ಟಕ್ಕೂ ಸೂಳೆಯರು ಇರುವುದೇ ಗಂಡಸರಿಗಾಗಿ. ಆದರೆ, ಸೂಳೆಯರನ್ನು ನಿಂದಿಸುವಂತೆ ಅವರಿಂದ ಸುಖ ಪಡುವ ಗಂಡಸರನ್ನು ಸಮಾಜ ನಿಂದಿಸುವುದಿಲ್ಲ. ಬ್ಲಡಿ ಶಿಟ್, ಸಮಾಜದಲ್ಲಿನ ವೇಶ್ಯೆಯರನ್ನು ಸರಿಯಾಗಿ ಲೆಕ್ಕ ಇಡಲು ಸಾಧ್ಯವಾಗುತ್ತಾ ಹೇಳು. ನಮ್ಮೂರುಗಳಲ್ಲೇ ಎಷ್ಟು ಜನ ಹರಾಮಿ ರಂಡೇರು ತೋಟ, ಕಾಡು ಮನೆಗಳಲ್ಲಿ ಕದ್ದು ಪರ ಗಂಡಸರಿಗೆ ಮಧು ಉಣಿಸುವುದಿಲ್ಲ ಹೇಳು...'' ಎಂದು ನಗುತ್ತಾ ಸೋನಾಗಾಚಿಯ ಮುಖ್ಯ ರಸ್ತೆಯಲ್ಲಿ ನಡೆಯುತ್ತಾ ಹೇಳಿದ್ದ ಮಧುಕೇಶ್ವರ. ಅಲ್ಲಮಪ್ರಭು ಮಾತು ಕಳೆದುಕೊಂಡವನಂತೆ ನಡೆಯುತ್ತಿದ್ದ. ಸುಮಾರು ಕಡೆ ಗುರುತಿರುವ ವೇಶ್ಯೆಯರನ್ನು ತೋರಿಸಿದ್ದ ಮಧುಕೇಶ್ವರ. ಒಂದೂವರೆ ಗಂಟೆಯಕಾಲ ಸುತ್ತಿದ ಮೇಲೆ ಒಂದು ಕಡೆ ಸುಂದರ ಯುವತಿಯೊಬ್ಬಳು ಅಲ್ಲಮಪ್ರಭುವಿನ ಮನ ಸೆಳೆದಿದ್ದಳು. ಮಧುಕೇಶ್ವರ ಅಲ್ಲಮಪ್ರಭುವನ್ನು ಆ ಪುಟ್ಟ ಮನೆಯಲ್ಲಿ ಬಿಟ್ಟು, ಅವಳಿಗೆ ಅಲ್ಲಮಪ್ರಭುವನ್ನು ಪರಿಚಯ ಮಾಡಿಸಿ, ''ನಿನ್ನ ಬಗ್ಗೆ ಹೇಳಿದ್ದೇನೆ. ಆರಾಮ ಎರಡು ಗಂಟೆ ಮಾತನಾಡಿಕೊಂಡು ಕಳೆದು ಬಿಡು, ಜೊತೆಗೆ ಡ್ರಿಂಕ್ಸ್ ಬೇಕಾದರೆ ಅರೆಂಜ್ ಮಾಡುತ್ತಾಳೆ. ದೇಹವನ್ನು ಬೇಕಾದರೂ ಸವಿದು ಆನಂದಿಸು. ತುಂಬಾ ಒಳ್ಳೆಯ ಹೆಂಗಸು. ಗಲೀಜಿಲ್ಲ. ನಾನು ಒಂದು ರೌಂಡ್ ಹೊಡೆದು ಬರ್ತೇನೆ.'' ಎಂದು ಮರೆಯಾಗಿದ್ದ. ಬೇರೆ ಕಡೆಯಿದ್ದಂತೆ ಅಲ್ಲಿ ಗಜಿಬಿಜಿಯಿರಲಿಲ್ಲ. ಅವನು ಮಂಚದ ಮೇಲೆ ಕುಳಿತುಕೊಳ್ಳುತ್ತಾ ''ನಿನ್ನ ಹೆಸರೇನು...?'' ಕೇಳಿದ್ದ. ''ಸೋನಾ...'' ಎಂದು ಅವಳು ನಕ್ಕಾಗ ಕೆನ್ನೆಗಳು ಕುಳಿ ಬಿದ್ದಿದ್ದವು.

''ಸೋನಾ ಎಂದರೆ ಚಿನ್ನ...'' ಎಂದ ಅಲ್ಲಮಪ್ರಭುವಿಗೆ ಅವಳು ತನಗೆ ತಕ್ಕದಾದ ಹೆಣ್ಣು ಅನ್ನಿಸಿತು. ಮೀನಾಕ್ಷಿ ಹೆಗಡೆಗಿಂತಲೂ ಸುಂದರವಾಗಿದ್ದಳು. ''ಹೌದು, ಇಲ್ಲಿನ ಸುಮಾರು ಹೆಂಗಸರ ಹೆಸರು ಸೋನಾ ಎಂದೆ. ಯೌವನ ಮತ್ತು ಸೌಂದರ್ಯ ಇರುವವರೆಗೂ ಪ್ರತಿಯೊಬ್ಬರೂ ಸೋನಾಗಳೇ ಆಗಿರುತ್ತಾರೆ. ಅವೆರಡೂ ಖಾಲಿಯಾದಂತೆ ಗುಜರಿಗೆ ಹಾಕುವ ತುಕ್ಕಿಡಿದ ಕಬ್ಬಿಣದ ತುಂಡುಗಳೇ...''